## ಹಾರುವ ಬೀಜಗಳು

ಕೆಂಪುಕಿತ್ತಳೆ ಬಣ್ಣದ ಹೂವನ್ನು ದಂಡಿಯಾಗಿ ಬಿಡುವ ಆಫ್ರಿಕನ್ ಟ್ಯುಲಿಪ್ ಅಥವಾ ನೀರುಕಾಯಿ ಮರವು ಭಾರತದ ಮುಖ್ಯ ಅಲಂಕಾರಿಕ ಮರ. ಇದು ಬೀದಿಬದಿಯ ಮರವೂ ಹೌದು. ಈ ಮರದ ಕೋಡುಗಳು ಉದ್ದನೆಯವು ಮತ್ತು ಹಸಿಯಾದಾಗಿದ್ದಾಗ ಒಡೆದರೆ ನೀರನ್ನು ಜಿನುಗಿಸುವವು. ಮರದಿಂದ ಬಿದ್ದು, ಒಣಗಿ ನೆಲವನ್ನು ಸೇರಿ ದೋಣಿ ಆಕಾರದ ಎರಡು ಭಾಗಗಳಾಗಿ ವಿಭಜನೆಯಾಗುತ್ತವೆ. ಅದರಲ್ಲಿ ಪ್ರತಿ ಅರ್ಧವೂ ಸುಮಾರು 500 ತೆಳುವಾದ, ಚಪ್ಪಟೆ ಬೀಜಗಳನ್ನು ಹೊರ ಚೆಲ್ಲುತ್ತದೆ. ಬೇಸಗೆಗೆ ಮನೆಯಂಗಳದಲ್ಲಿ ಸಿಗುವ ಪ್ರಮುಖ ಕಸವೂ ಇದೇ. ಗುಡಿಸಿದರೂ ಮುಗಿಯದಷ್ಟು ತೆಳುವಾದ ಬೀಜಗಳು ಮತ್ತೆ ಅಲ್ಲಿ ಬಂದು ಸೇರುತ್ತವೆ.

ನೀರು, ಮಣ್ಣಿನ ಸಂಸರ್ಗದಲ್ಲಿ ಬೀಜಗಳು ಬೇಗನೆ ಮೊಳಕೆಯೊಡೆಯುತ್ತವೆ. ಹಾಗಾಗಿ ನೀರುಕಾಯಿ ಮರ ಆಕ್ರಮಣಕಾರಿ ಜಾತಿಯ ಸಸ್ಯ. ಆಫ್ರಿಕನ್ ಟ್ಯುಲಿಪ್ ಮರದ ಬೀಜಗಳು ತೆಳುವಾಗಿ, ಪಾರದರ್ಶಕವಾಗಿ ಹಾರಲು ಅನುವಾಗುವ ಸೂಕ್ಷ್ಮವಾದ ರೆಕ್ಕೆಗಳನ್ನು ಹೊಂದಿವೆ. ಈ ಹಾಳೆಗಳಂತಹ ಪಾಲಿಥೀನ್ ನುಣುಪಿನ ಬೀಜಗಳು ಗಾಳಿ, ನೀರು ಮತ್ತು ಪಕ್ಷಿಗಳಿಂದ ಪ್ರಸಾರವಾಗುತ್ತವೆ. ಹೃದಯಾಕಾರದ ಬೀಜಗಳಿಗೆ ಸುತ್ತಲಿರುವ ಪಾರದರ್ಶಕ ಕವಚ ರೆಕ್ಕೆಯಂತೆ ಗಾಳಿಯಲ್ಲಿ ಪಸರಿಸಲು ಸಹಾಯ ಮಾಡುತ್ತದೆ. ಮಂದವಾದ ಗಾಳಿಯೂ ಬೀಜಗಳನ್ನು ಬಹಳ ದೂರ ಸಾಗಿಸಬಹುದು. ಹಗುರವಾಗಿರುವ ಕಾರಣ ನೀರಿನ ಮೇಲೆ ತೇಲಿ ಪಸರಿಸುತ್ತವೆ. ಏರೊಡೈನಾಮಿಕ್ ಪರಿಭಾಷೆಯಲ್ಲಿ ಇದು ಗ್ಲೈಡರ್ ರೀತಿಯ ಚಲನೆಯನ್ನು ಹೊಂದಿದೆ. ನಿಮಗೇನಾದರೂ ನೀರುಕಾಯಿ ಮರದ ಹಾಳೆಯಂತಹ ಬೀಜಗಳು ದೊರೆತರೆ, ಒಮ್ಮೆ ಹಾರಿಸಿ ನೋಡಿ. ಪ್ರತಿಯೊಂದು ಬೀಜವೂ ಪರಿಸರ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಾಧ್ಯವಾದಷ್ಟು ಕಾಲ ವರ್ತುಲಾಕಾರದಲ್ಲಿ ಗಾಳಿಯಲ್ಲಿ ತೇಲುವಂತೆ ನಿಸರ್ಗವೇ ವಿನ್ಯಾಸಗೊಳಿಸಿದೆ.

–ವಿಶ್ವನಾಥ ಭಟ್, ಧಾರವಾಡ






## ಹಿಂದಿನ ಕಾಲದ 'ಸ್ಮಾರ್ಟ್ ವಾಚ್'

ಚಿತ್ರದಲ್ಲಿ ಕಾಣುತ್ತಿರುವುದು ವೇಳೆ, ದಿನಾಂಕ, ತಿಂಗಳು, ಇಸವಿ ಹಾಗೂ ಆಯಾ ದಿನದ ಹವಾಮಾನ, ದಿನದ ಉಷ್ಣತೆಯನ್ನು ತೋರಿಸುವ ಹಿಂದಿನ ಕಾಲದ 'ಸ್ಮಾರ್ಟ್ ವಾಚ್'. ಇದು ರಾಜಸ್ಥಾನದ ಜೋಧಪುರದ ಉಮ್ಮೆದ ರಾಜನ ಅರಮನೆಯ ವಸ್ತುಸಂಗ್ರಹಾಲಯದಲ್ಲಿದೆ. ಸುಮಾರು 347 ಕೋಣೆಗಳನ್ನು ಹೊಂದಿರುವ ಈ ಅರಮನೆಯಲ್ಲಿ ಇಂಥ ವೈವಿಧ್ಯಮಯ ಗಡಿಯಾರಗಳಿಗಾಗಿಯೇ ಒಂದು ಕೋಣೆಯನ್ನು ಮೀಸಲಿಡಲಾಗಿದೆ. ದೇಶ ವಿದೇಶಗಳಿಂದ ತಂದ, ಕಾಣಿಕೆಯಾಗಿ ಬಂದ ಗಡಿಯಾರಗಳು ಇಲ್ಲಿ ಭದ್ರವಾಗಿ ಗೋಡೆಯೇರಿವೆ. ರಾಜಸ್ಥಾನದಲ್ಲಿ 1920ರಿಂದ ಸತತ ಮೂರು ಬಾರಿ ಬರಗಾಲ ಉಂಟಾದಾಗ ಜನರಿಗೆ ಉದ್ಯೋಗ ದೊರಕಿಸಲೆಂದು ರಾಜ ಉಮ್ಮೆದಸಿಂಗ ರಾಠೋಡ್ ಅವರು ಈ ಅರಮನೆಯ ನಿರ್ಮಾಣ ಆರಂಭಿಸಿದರು.

–ಸ್ಮಿತಾ ಮೈಸೂರ, ಹುಬ್ಬಳ್ಳಿ

## ಮೂಷಿಕ ಹುಂಡಿ

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿಂಬ್ರವಳ್ಳಿಗೆ ಹೋಗಿದ್ದಾಗ ಅಲ್ಲಿನ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಕಂಡ ಚಿತ್ರವಿದು. ವಿನಾಯಕನ ಎದುರು ಕೈಮುಗಿದು ನಿಂತು, ಮುಂದೆ ಇದ್ದ ಮರದ ಪೆಟ್ಟಿಗೆಯತ್ತ ತಿರುಗಿದಾಗ ಈ 'ಮೂಷಿಕ ಹುಂಡಿ' ಕಂಡಿತು. ಕೈಯಲ್ಲಿ ತಟ್ಟೆ ಹಿಡಿದು ನಿಂತ ಮೂಷಿಕ, ವಿನಾಯಕನ ಜೊತೆಗೆ ನನಗೂ ಮೋದಕ ಕೊಡಿ ಎನ್ನುವಂತಿತ್ತು. ಅರೆ ಇದೇನಪ್ಪಾ ಅಂತ ಹತ್ತಿರ ಹೋಗಿ ನೋಡಿದಾಗ ಆ ತಟ್ಟೆಯ ಮಧ್ಯದಲ್ಲಿ ಹಣ ಹಾಕಲು ಸಣ್ಣ ರಂಧ್ರವಿದ್ದುದನ್ನು ಕಂಡಾಗ ಇದು ಹುಂಡಿಯೆಂದು ಅರಿವಿಗೆ ಬಂತು.

–ಶಾಲಿನಿ ನಾಯಕ್, ಬೆಂಗಳೂರು

